I/611856/2024

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/32/ಸಿಡಿಸಿ(2)/2024(C-1415618)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:27/05/2024.

**:ಸುತ್ತೋಲೆ:**

ವಿಷಯ: 2024-25 ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿಹೆಚ್.ಡಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಬಯಸುವ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕ ವರ್ಗದವರುಗಳ ವಿವರಗಳನ್ನುಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: ಇಡಿ : ಕೆಇಎ : ಆಡಳಿತ : ಸಿ.ಆರ್-05/2024 ದಿ:22-05-2024

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25 ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿ.ಹೆಚ್.ಡಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಬಯಸುವ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರು ಗೂಗಲ್ ಫಾರ್ಮ್ ನಲ್ಲಿ ತಮ್ಮ ವಿವರಗಳನ್ನು ಭರ್ತಿ ಮಾಡಿ, **ದಿನಾಂಕ: 03/06/2024** ರೊಳಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿಹೆಚ್.ಡಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಬಯಸಿ, ಗೂಗಲ್ ಫಾರ್ಮ್‌ನಲ್ಲಿ ಬಂದಂತಹ ಅರ್ಜಿಗಳನ್ನು ವಿಭಾಗಾವಾರು ಬೋಧಕವರ್ಗದವರ ಜೇಷ್ಟತಾ ಪಟ್ಟಿಯನ್ನು ತಯಾರಿಸಿ, ಅದರಂತೆ ನಿಯಮಾನುಸಾರ ಶೇಕಡ 5 ಅನ್ನು ಮೀರದಂತೆ, ಅರ್ಹ ಬೋದಕ ವರ್ಗದವರಿಗೆ 2024-25 ನೇ ಸಾಲಿಗೆ ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸಲು / ಪರೀಕ್ಷೆ ಬರೆಯಲು ಮತ್ತು ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗುವುದು. ಗೂಗಲ್ ಫಾರ್ಮ್‌ನಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಬಯಸಿ ವಿವರಗಳನ್ನು ಸಲ್ಲಿಸದೆ, ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 61(3) ರ ಅಪೆಂಡಿಕ್ಸ್ II 'ಎ' ನಿಯಮ(1)ರ ಉಪನಿಯಮ(1) ರಿಂದ (10) ರನ್ವಯ ಹಾಗೂ ಅಪೆಂಡಿಕ್ಸ್ II 'ಎ' ಯ ನಿಯಮ-1ರ ನಿಯಮಗಳೊಂದಿಗೆ ಸೇರಿಸಲಾದ (ಎ) ರಿಂದ (ಎಂ) ರವರೆಗಿನ ಉಪಬಂಧಗಳಲ್ಲಿನ ಕಾರ್ಯವಿಧಾನಗಳನ್ನು

ಪೂರೈಸುವ ಮತ್ತು ಸರ್ಕಾರದ ಆದೇಶದಲ್ಲಿನ ಷರತ್ತುಗಳಿಗೊಳಪಟ್ಟು ಸರ್ಕಾರಿ ನೌಕರರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಎಂ.ಇ / ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಈ ಕೆಳಕಂಡ ಅಂಶಗಳನ್ವಯ ಸರ್ಕಾರದ ಹಂತದಲ್ಲಿಯೇ ನಿಯೋಜನೆ ಮಾಡಲಾಗುವುದು.

1. ಎಂ.ಟೆಕ್ / ಪಿಹೆಚ್.ಡಿ ಉನ್ನತ ವ್ಯಾಸಂಗ ಮಾಡಲು ಬಯಸುವ ಉಪನ್ಯಾಸಕರು ಕನಿಷ್ಠ 5 ವರ್ಷಗಳ ನಿರಂತರ / ಸಕ್ರಮ ಸೇವೆಯನ್ನು ಸಲ್ಲಿಸಿರಬೇಕು ಹಾಗೂ ಕ್ರಮವಾಗಿ 48 / 45 ವರ್ಷ ವಯಸ್ಸಿನೊಳಗಿರಬೇಕು.
2. ಎರಡು ವರ್ಷಗಳ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಕೆ.ಸಿ.ಎಸ್ ಉಪನಿಯಮ(7) ರನ್ವಯ ಉನ್ನತ ವ್ಯಾಸಂಗಕ್ಕೆ ಒಂದು ಬಾರಿ ಮಾತ್ರ ನಿಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.
4. ಉಪನಿಯಮ(4)ರನ್ವಯ ಉನ್ನತ ವ್ಯಾಸಂಗಕ್ಕಾಗಿ ಉಪನ್ಯಾಸಕರನ್ನು ಸದರಿಯವರ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡ 5 ನ್ನು ಮೀರದಂತೆ ನಿಯೋಜಿಸಲಾಗುವುದು.
5. ಉಪನ್ಯಾಸಕರನ್ನು ಉಪನಿಯಮ(5)ರನ್ವಯ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದು.
6. ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ, ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಶಿಫಾರಸ್ಸಿನೊಂದಿಗೆ ಈ ಕಛೇರಿ ಸುತ್ತೋಲೆ ಸಂ: ಡಿಟಿಇ/16/ಸಿಡಿಸಿ(2)2018-19, ದಿನಾಂಕ: 24/7/2018 (ಅನುಬಂಧ ಲಗತ್ತಿಸಿದೆ) ರಲ್ಲಿ ತಿಳಿಸಿರುವಂತೆ, ಎಲ್ಲಾ ದಾಖಲೆಗಳನ್ನು/ ಮಾಹಿತಿಗಳನ್ನು ದೃಢೀಕರಿಸಿ ದ್ವಿ-ಪ್ರತಿಗಳೊಂದಿಗೆ ಸಲ್ಲಿಸಬೇಕು.
7. ಎಂ.ಟೆಕ್ / ಪಿಹೆಚ್.ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿಸಲ್ಲಿಸಲು / ಪರೀಕ್ಷೆಬರೆಯಲು / ಸಂದರ್ಶನಕ್ಕೆ ಹಾಜರಾಗಲು ನೀಡುವ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು.
8. ಸರ್ಕಾರದ ಪತ್ರ ಸಂಖ್ಯೆ: ಇಡಿ 116 ಟಿಪಿಇ 2022 ದಿ:28-10-2022 ರನ್ವಯ ಸರ್ಕಾರಿ ಪಾಲಿಟೆಕ್ನಿಕ್ ಬೋಧಕವರ್ಗದವರು ಪೂರ್ಣಕಾಲಿಕ ಎಂ.ಟೆಕ್ ಉನ್ನತ ವ್ಯಾಸಂಗದ ನಿಯೋಜನೆಗೆ ಮಾತ್ರ ಪ್ರಸ್ತಾವನೆ ಸಲ್ಲಿಸುವುದು.
9. ಪೂರ್ಣಕಾಲಿಕ ನೆಲೆಯ ಎಂ.ಟೆಕ್ / ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಬೋಧಕ ವರ್ಗದವರು ಇಲಾಖೆಯ / ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರವೇಶ ಶುಲ್ಕವನ್ನು ಪಾವತಿಸಬೇಕು.

ಗೂಗಲ್ ಫಾರಂ: https://forms.gle/wsBALQX5k7S9dcwd7

ಜಂಟಿ ನಿರ್ದೇಶಕರು (ಸಿಡಿಸಿ).

ಇವರಿಗೆ:

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್/ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು ಮತ್ತು ಬೋಧಕ ವರ್ಗದವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.